**CC. No. 212/2021** **DW -1**

ಪ್ರಮಾಣೀಕರಿಸಲಾದ ದಿನಾಂಕಃ- **31.07.2025.**

ಮುಂದುವರಿದ ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ. ಎಂ. ಹೆಚ್. ಎನ್ ವಕೀಲರಿಂದಃ-

ನನ್ನ ಚೆಕ್ ಅನ್ನು ಸಬಿತಾರವರಿಂದ PW 1 ರವರು ಪಡೆದು ಈ ಸುಳ್ಳು ದೂರು ಹಾಕಿರುತ್ತಾರೆ. ನನಗೆ PW 1 ರವರು ಗೊತ್ತಿಲ್ಲ. ಸಬಿತಾರವರ ಗಂಡ ಲೋಪ ಮುದ್ರಾ ಆಸ್ಪತ್ರೆಯಲ್ಲಿದ್ದಾಗ PW 1 ರವರು ದೂರವಾಣಿ ಕರೆ ಮಾಡಿ ಪೊಣ್ಣಪ್ಪರವರ ಹಣ ತೆಗೆದುಕೊಂಡು ಬಾ PW 1 ರವರು ಹೇಳಿದರು. ನಾನು PW 1 ರವರ ಕೈ ಯಲ್ಲಿ ರೂ. 20 ಸಾವಿರ ಮತ್ತು ಪೊಣ್ಣಪ್ಪನವರ ತಿಥಿ ಕಾರ್ಯಕ್ಕೆರೂ. 50 ಸಾವಿರ ಹಣ ಕೊಟ್ಟೆ ಪೊಣ್ಣಪ್ಪನವರು ಇದ್ದಾಗಲೇ ರೂ. 5 ಲಕ್ಷ ಹಣ ಕೊಟ್ಟಿರುತ್ತೇನೆ. ನಾನು 2 ಚೆಕ್ ಗಳನ್ನು ಸಬಿತಾರವರಿಗೆ ಈ ಸಂಘದ ವ್ಯವಹಾರದ ಸಮಯದಲ್ಲಿ ಸಾಲ ಪಡೆಯಲು ಭದ್ರತೆಗೆಂದು ನನ್ನ ಚೆಕ್‌ಗಳು ಕೊಟ್ಟಿದ್ದು, ಅವರ ಗಂಡ ತೀರಿಕೊಂಡು ಸಾಲ ಮನ್ನಾವಾಗಿ, ನನ್ನ ಆ 2 ಚೆಕ್‌ಗಳು ಸಬಿತಾರವರ ಕೈ ಗೆ ಹೋಯಿತು. ಪೊಣ್ಣಪ್ಪನವರಿಂದ ನಾನು ಕೈ ಸಾಲ ಪಡೆಯುತ್ತಿದ್ದು ಮೇಲೆ ಹೇಳಿದಂತೆ ಎಲ್ಲಾ ಹಣವನ್ನು ತೀರಿಸಿರುತ್ತೇನೆ. ಕೈ ಸಾಲ ಎಂದು ಪಡೆದಾಗ ಪೊಣ್ಣಪ್ಪನವರು ಬೇರೆ 2 ಚೆಕ್‌ಗಳನ್ನು ನನ್ನಿಂದ ಪಡೆದಿರುತ್ತಾರೆ. ಸಬಿತಾರವರು ಗೋಣಿಕೊಪ್ಪ ಪೊ. ಠಾಣೆ, ಪೊನ್ನಂಪೇಟೆ ಪೊ. ಠಾಣೆ, ಮತ್ತು ಬೆಂಗಳೂರು ಪೊ. ಠಾಣೆಗಳಲ್ಲಿ ನನ್ನ ಹತ್ತಿರ ಅವರ ಚಿನ್ನ ಇದೆ ಎಂದು ಸುಳ್ಳು ದೂರುಗಳನ್ನು ಕೊಟ್ಟಿರುತ್ತಾರೆ. 2020 ರಲ್ಲಿ ಈ ಸುಳ್ಳು ದೂರುಗಳನ್ನು ಕೊಟ್ಟು ನನ್ನ ಸಹಿಯನ್ನು ಖಾಲಿ ಛಾಪಾ ಕಾಗದದ ಮೇಲೆ ಪಡೆದಿರುತ್ತಾರೆ.

ನನಗೆ 2013 ರಿಂದ Fancy shop, foot wear, ಬಟ್ಟೆ ಅಂಗಡಿಗಳು ಇದೆ. ನಾನು PW 1 ರವರ ಮನೆಗೆ ಮನೆ ಕೆಲಸಕ್ಕೆ ಹೋಗುತ್ತಿರಲಿಲ್ಲ.

**CC. No.212/2021** **DW - 1**

ಸಾಕ್ಷಿಯು ಅಂಗಡಿಗಳು ಇದ್ದ ಬಗ್ಗೆ ವ್ಯಾಪಾರೋಧ್ಯಮದ ಪರವಾನಗಿಯನ್ನು, 2 ಉಧ್ಯಮ ಮತ್ತು ವ್ಯಾಪಾರ ಲೈಸನ್ಸ್ ಅನ್ನು, registration certificate, ಬಾಡಿಗೆ ಕರಾರು , ಉಧ್ಯಮ ಮತ್ತು ವ್ಯಾಪಾರ ಲೈಸನ್ಸ್ ಅನ್ನು, ಎರಡು Income tax return acknowledgement ಹಾಜರುಪಸಿಡಿದ್ದು ಅವುಗಳನ್ನು ನಿ. ಡಿ 1 ರಿಂದ 10 ಎಂದು ಗುರುತಿಸಲಾಯಿತು. PW 1 ರವರು ನನ್ನ ಮೇಲೆ S.C. 6/2022 ದಾವೆ ತಂದಿರುತ್ತಾರೆ. ಇನ್ನೊಂದು ಚೆಕ್ ನಲ್ಲಿ ಸುಳ್ಳು ದಾವೆ ತಂದಿದ್ದಾರೆ. ಆದ್ದರಿಂದಈ ದೂರನ್ನು ವಜಾಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

<u>ಪಾಟೀ ಸವಾಲುಃ - ಫಿರ್ಯಾದುದಾರರ ಪರ ವಕೀಲರಿಂದ ಃ -</u>

ಫಿರ್ಯಾದುದಾರರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**Sd/xxx-**
ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ